*ಅ) ಅದಕ್ಕಾಗಿ ಒದಗಿಸಲಾದ ಹಣವೆಷ್ಟು?*

*ಇ) ಎಷ್ಟು ದಿನಗಳಲ್ಲಿ ಆ ಕೆಲಸವು ಪೂರ್ಣವಾಗುವುದು?*

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು): ಅ) ಭದ್ರಾ ಅರಣ್ಯದಲ್ಲಿ ವಾಸಿಸುವ ಜನರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಮತ್ತು ಪುನರ್ವಸತಿ ಕಲ್ಪಿಸಲು 12.76 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಯನ್ನು ಕೇಂದ್ರ ಸರ್ಕಾರದ ಧನಸಹಾಯವನ್ನು ಕೋರಿ ಸಲ್ಲಿಸಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಹಣ ಇನ್ನೂ ಒದಗಿಸಿರುವುದಿಲ್ಲ.

ಇ) ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಭೂಸ್ವಾಧೀನಕ್ಕೆ ಬೇಕಾದ ಹಣದಲ್ಲಿ $\frac{1}{4}$ ಭಾಗವನ್ನು ಕಂದಾಯ ಇಲಾಖೆಗೆ ಪಾವತಿ ಮಾಡಿ ಭೂಸ್ವಾಧೀನ ಕಾರ್ಯಕ್ರಮವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

**ಹಿರೇಕೆರೂರು ತಾಲ್ಲೂಕಿನಲ್ಲಿ "ಕ್ಷ-ಕಿರಣ ಯಂತ್ರ ಇಲ್ಲದ ಬಗ್ಗೆ**

279 - ಶ್ರೀ ಬಿ.ಪೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಮಲೆನಾಡಿನ ಗ್ರಾಮೀಣ ಪ್ರದೇಶ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ?*

*ಆ) ತಾಲ್ಲೂಕಿನಲ್ಲಿ ಯಾವುದೇ ಆಸ್ಪತ್ರೆಯಲ್ಲಿಯೂ ಕ್ಷ-ಕಿರಣ ಯಂತ್ರ ಇಲ್ಲದೆ ಸಾರ್ವಜನಿಕರಿಗೆ ಅತ್ಯಂತ ತೊಂದರೆ ಹಾಗೂ ಅನ್ಯಾಯವಾಗಿರುವುದನ್ನು ಸರ್ಕಾರ ಗಮನಿಸಿದೆಯೇ?*

*ಇ) ಈಗಲಾದರೂ ಹಿರೇಕೆರೂರು ತಾಲ್ಲೂಕಿಗೆ ಕ್ಷ-ಕಿರಣ ಯಂತ್ರವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

*ಈ) ಆ ಬಗ್ಗೆ ಸರ್ಕಾರದ ನೀತಿ ಹಾಗೂ ನಿರ್ದಿಷ್ಟ ನಿರ್ಣಯಗಳೇನು?*

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಸರ್ಕಾರವು ಗಮನಿಸಿದೆ.

ಆ) ಸರ್ಕಾರವು ಗಮನಿಸಿದೆ.

ಇ) ಧಾರವಾಡ ಜಿಲ್ಲಾ ಪರಿಷತ್ತು ನಾಲ್ಕು ಕ್ಷ-ಕಿರಣ ಯಂತ್ರಗಳ ಖರೀದಿಗೆ ಅನುಮತಿ ನೀಡಿದ್ದು, ಇವುಗಳಲ್ಲಿ ಒಂದು ಕ್ಷ-ಕಿರಣ ಯಂತ್ರವನ್ನು ಹಿರೇಕೆರೂರು ಸಾರ್ವಜನಿಕ ಆಸ್ಪತ್ರೆಗೆ ಒದಗಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತು ಇವರಿಗೆ ತಿಳಿಸಲಾಗುವುದು.

ಈ) ರಾಜ್ಯ ಸರ್ಕಾರವು 100 ಹಾಸಿಗೆಗಳಿಗಿಂತ ಹೆಚ್ಚಿನ ಹಾಸಿಗೆಗಳುಳ್ಳ ಆಸ್ಪತ್ರೆಗಳನ್ನು ಅಧೀನಕ್ಕೆ ತೆಗೆದುಕೊಂಡಿದ್ದಲ್ಲ ಇವುಗಳಿಗೆ ಕ್ಷ-ಕಿರಣ ಯಂತ್ರಗಳನ್ನು ಸರಬರಾಜು ಮಾಡುವ ಜವಾಬ್ದಾರಿ ರಾಜ್ಯಸರ್ಕಾರದ್ದಾಗಿರುತ್ತದೆ. ಉಳಿದ ಆಸ್ಪತ್ರೆಗಳು ಜಿಲ್ಲಾ ಪರಿಷತ್ತ ವ್ಯಾಪ್ತಿಯಲ್ಲಿ ಬರುವುದರಿಂದ ಈ ಆಸ್ಪತ್ರೆಗಳಿಗೆ ಕ್ಷ-ಕಿರಣ ಯಂತ್ರ ಸರಬರಾಜು ಮಾಡುವ ಹೊಣೆ ಸಂಬಂಧಪಟ್ಟ ಜಿಲ್ಲಾಪರಿಷತ್ತದ್ದಾಗಿರುತ್ತದೆ.

**ರಾಜ್ಯದಲ್ಲಿ ಮಂಜೂರಾದ ಪಶುವೈದ್ಯ ಶಾಲೆಗಳ ಸಂಖ್ಯೆ**

236 - ಶ್ರೀಮತಿ ಮೋಟಮ್ಮ (ಮೂಡಿಗೆರೆ); ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಮಂಜೂರಾದ ಪಶುವೈದ್ಯ ಶಾಲೆಗಳು ಹಾಗೂ ಕೇಂದ್ರಗಳೆಷ್ಟು (ಜಿಲ್ಲಾವಾರು ಮಾಹಿತಿ ಕೊಡುವುದು)

ಆ) ಕೆಲವು ಕಡೆ ಕಟ್ಟಡ ಕಟ್ಟಿದ್ದು, ಆಸ್ಪತ್ರೆ ಅವಶ್ಯಕತೆ ಇದೆಯೆಂದು ಸರ್ಕಾರಕ್ಕೆ ಮನವಿ ಬಂದಿದ್ದರೂ, ಅಂತಹ ಕಡೆ ಪಶುಚಿಕಿತ್ಸಾ ಕೇಂದ್ರ ಮಂಜೂರು ಮಾಡದಿರಲು ಕಾರಣವೇನು? (ಉದಾ: ಮೂಡಿಗೆರೆ ತಾಲ್ಲೂಕು, ಕುಂದೂರು ಗ್ರಾಮ)

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು): 1993-94ನೇ ಸಾಲಿನಲ್ಲಿ

ಅ) ಪಶು ಆಸ್ಪತ್ರೆ 9

ಆ) ಪಶು ಚಿಕಿತ್ಸಾಲಯ 14

ಇ) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ 200

(ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ.)

ಈ) ಬಂದಿರುವ ಮನವಿಗಳು ಪ್ರಾರಂಭಿಸಬೇಕಾಗಿರುವ ಸಂಸ್ಥೆಗಳ ಸಂಖ್ಯೆಗೆ ಹೆಚ್ಚಾಗಿರುವುದರಿಂದ, ಅವುಗಳೆಲ್ಲವನ್ನು ಈ ವರ್ಷದಲ್ಲಿ ಮಂಜೂರು ಮಾಡಲಾಗಿಲ್ಲ. ಮೂಡಿಗೆರೆ ತಾಲ್ಲೂಕು ಕುಂದೂರು ಗ್ರಾಮಕ್ಕೆ 1994-95ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

**ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಪಶುವೈದ್ಯ ಸಂಸ್ಥೆಗಳ ಜಿಲ್ಲಾವಾರು ವಿವರ**

| ಕ್ರ. ಸಂಖ್ಯೆ | ಜಿಲ್ಲೆಯ ಹೆಸರು | ಪಶು ಆಸ್ಪತ್ರೆ | ಪಶು ಚಿಕಿತ್ಸಾಲಯ | ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ |
|---|---|---|---|---|
| 1) | ಬೆಂಗಳೂರು | 3 | 3 | 3 |
| 2) | ಬೆಂಗಳೂರು (ಗ್ರಾಮಾಂತರ) | - | 1 | 10 |
| 3) | ಕೋಲಾರ | - | - | 14 |
| 4) | ಶಿವಮೊಗ್ಗ | - | - | 9 |
| 5) | ಚಿತ್ರದುರ್ಗ | - | - | 9 |
| 6) | ತುಮಕೂರು | - | 1 | 14 |
| 7) | ಮಂಡ್ಯ | 4 | 6 | 26 |
| 8) | ಕೊಡಗು | - | - | 2 |
| 9) | ಚಿಕ್ಕಮಗಳೂರು | - | - | 5 |
| 10) | ದಕ್ಷಿಣ ಕನ್ನಡ | - | - | 11 |
| 11) | ಹಾಸನ | 1 | 1 | 15 |
| 12) | ಮೈಸೂರು | 1 | 1 | 11 |
| 13) | ಧಾರವಾಡ | - | - | 17 |
| 14) | ಬೆಳಗಾವಿ | - | - | 12 |
| 15) | ಬಿಜಾಪುರ | - | - | 10 |
| 16) | ಬೀದರ್ | - | - | 5 |

| | | | | |
|---|---|---|---|---|
| 17) | ಗುಲ್ಬರ್ಗ | - | - | 10 |
| 18) | ರಾಯಚೂರು | - | - | 7 |
| 19) | ಬಳ್ಳಾರಿ | - | - | 4 |
| 20) | ಉತ್ತರ ಕನ್ನಡ | - | 1 | 6 |
| | ಒಟ್ಟು | 9 | 14 | 200 |

**ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿದ ವೈದ್ಯಾಧಿಕಾರಿಗಳು**

253 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿದ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಕಾಯ್ದಿರಿಸಿದ ಪಟ್ಟಿಗಳಲ್ಲಿ ಎಷ್ಟು ಅಭ್ಯರ್ಥಿಗಳು ನೇಮಕಾತಿ ಆದೇಶಗಳ ನಿರೀಕ್ಷಣೆಯಲ್ಲಿದ್ದಾರೆ?

ಇ) ಕಾಯ್ದಿರಿಸಿದ ಪಟ್ಟಿಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಭ್ಯರ್ಥಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಯಾವ ಸಮಯದಲ್ಲಿ ತೀರ್ಮಾನಿಸಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 75 ವೈದ್ಯಾಧಿಕಾರಿಗಳು.

ಆ) ಆಯ್ಕೆ ಸಮಿತಿಯು ಕಾಯ್ದಿರಿಸಿದ ಪಟ್ಟಿಯನ್ನು ತಯಾರಿಸಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆ**

280 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದಾಗಬೇಕು)

ಆ) ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಉದ್ದೇಶಿಸಿದೆಯೇ?

ಇ) ಎಷ್ಟು ಹುದ್ದೆಗಳನ್ನು ಯಾವ ವಿಧಾನದಿಂದ ಆಯ್ಕೆ ಮಾಡಿ ತುಂಬಲು ಸರ್ಕಾರ ತೀರ್ಮಾನಿಸಿದೆ.

ಈ) ಈ ಬಗ್ಗೆ ಸರ್ಕಾರ ನಿರ್ದಿಷ್ಟ ಹಾಗೂ ನಿಖರವಾದ ಸ್ಪಷ್ಟ ನಿರ್ಣಯ ಮತ್ತು ಕ್ರಮಗಳನ್ನು ತೆಗೆದುಕೊಂಡಿದೆಯೇ?

ಉ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ನೀತಿ ಮತ್ತು ನಿಯಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 18,934 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ. ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ. ಜಿಲ್ಲಾವಾರು ಹುದ್ದೆಯ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ.